**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆಃ– 220/2024**

| | | |
|---|---|---|
| **ಸಾಕ್ಷಿದಾರನ ಹೆಸರು** | : ಪ್ರಕಾಶ್ | **ಪಿ.ಡಬ್ಲ್ಯೂಃ– 3** |
| **ತಂದೆಯ ಹೆಸರು** | : ಕೃಷ್ಣೇಗೌಡ | **ಸಿ.ಡಬ್ಲ್ಯೂಃ– 2** |
| **ವಯಸ್ಸು** | : 28 ವರ್ಷ | |
| **ಉದ್ಯೋಗ** | : ಟೀ ವ್ಯಾಪಾರ | |
| **ವಾಸಸ್ಥಳ** | : ವಿದ್ಯಾರಣ್ಯಪುರಂ, ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿಃ08.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**1.** ನಾನು ಟೀ ವ್ಯಾಪಾರವನ್ನು 10 ವರ್ಷಗಳಿಂದ ಮಾಡುತ್ತಿದ್ದು, ನನ್ನ ಅಂಗಡಿ ಅಮೃತ್ ಗೋಲ್ಡ್ ಅಂಡ್ ಸಿಲ್ವರ್ ಪ್ಯಾಲಸ್ ಅಂಗಡಿಯಿಂದ ಸ್ವಲ್ಪ ಮುಂದೆ ಎಡಗಡೆ ಭಾಗದಲ್ಲಿ ಇರುತ್ತದೆ.

**2.** ನಾನು ದಾಖಲೆಗಳಿಗೆ ಸಹಿ ಮಾಡುತ್ತೇನೆ. ನಾನು ನನ್ನ ಸಹಿ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ತನ್ನ ಸಹಿ ಇರುವ ದಾಖಲೆ ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ನಿಶಾನೆ ಪಿ–35 ಎಂದು, ಸಾಕ್ಷಿಯ ಸಹಿಗಳನ್ನು ನಿಶಾನೆ ಪಿ–35(ಎ) ರಿಂದ 35(ಎಫ್) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಹಿಯನ್ನು ದಿಃ–24.08.2021 ರಂದು ಮಾಡಿರುತ್ತೇನೆ. ದಿಃ–24.08.2021 ರಂದು ನಾನು ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದಾಗ, ನನ್ನ ಅಂಗಡಿಗೆ

ಮಂಜುನಾಥ್ ಪೊಲೀಸ್ ರವರು ಬಂದು ನನ್ನನ್ನು ಕರೆದಿರುತ್ತಾರೆ. ನನ್ನನ್ನು ಅವರು ಅಮೃತ್ ಗೋಲ್ಡ್ ಅಂಡ್ ಸಿಲ್ವರ್ ಪ್ಯಾಲಸ್ ಅಂಗಡಿಯ ಬಳಿ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಚಾ.ಸಾಃ158 ರಾಜುರವರು ಇದ್ದರು. ಹಿಂದಿನ ದಿನ ಸದರಿ ಅಮೃತ್ ಗೋಲ್ಡ್ ಅಂಡ್ ಸಿಲ್ವರ್ ಪ್ಯಾಲಸ್ ಅಂಗಡಿಯಲ್ಲಿ ಚಿನ್ನ ಕಳ್ಳತನವಾಗಿ ಅಲ್ಲಿಯೇ ಶೂಟೌಟ್ ಆಗಿರುತ್ತದೆ. ಆ ವಿಚಾರಕ್ಕಾಗಿ ನನ್ನನ್ನು ಅಂಗಡಿಯ ಬಳಿ ಕರೆಸಿರುತ್ತಾರೆ. ಅದೇ ಸಮಯಕ್ಕೆ ರಾಜೇಶ್ ಎನ್ನುವವರು ಕೂಡ ಸದರಿ ಸ್ಥಳಕ್ಕೆ ಬಂದಿರುತ್ತಾರೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಅಂಗಡಿಯ ಸುತ್ತ ಟೇಪ್ ಹಾಕಲಾಗಿದ್ದು, ಅಂಗಡಿಯ ಮುಂಭಾಗದಲ್ಲಿ ನೆಲದ ಮೇಲೆ ಅಳವಡಿಸಿದ ಟೈಲ್ಸ್ ಮೇಲೆ ರಕ್ತದ ಕಲೆ ಇತ್ತು.

**3.** ಸದರಿ ಸ್ಥಳದಲ್ಲಿ ನನಗೆ ಘಟನೆಯ ವಿದ್ಯಾಮಾನಗಳನ್ನು ತಿಳಿಸಿ, ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ಗುರುತಿಸಿದ್ದು, ಸದರಿ ದಾಖಲೆ ಪೊಲೀಸ್ ನೋಟೀಸ್ ಆಗಿದ್ದು, ಅದನ್ನು ನಿಶಾನೆ ಪಿ–36 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ–36(ಎ) ಎಂದು ಗುರುತಿಸಲಾಯಿತು.

**4.** ಸದರಿ ಘಟನಾ ಸ್ಥಳದಲ್ಲಿ ಬಿದಿದ್ದ ರಕ್ತ ಸಹಿತ ಮಣ್ಣನ್ನು ಮತ್ತು ಪಕ್ಕದಲ್ಲಿಯೇ ಇದ್ದ ರಕ್ತ ರಹಿತ ಮಣ್ಣನ್ನು ಒಂದು ಡಬ್ಬದಲ್ಲಿ ಪೊಲೀಸರು ಪಡೆದುಕೊಂಡಿರುತ್ತಾರೆ. ನಂತರ ನನ್ನನ್ನು ಮತ್ತು ರಾಜೇಶ್ ನನ್ನು ಅಮೃತ್ ಗೋಲ್ಡ್ ಅಂಡ್ ಸಿಲ್ವರ್ ಪ್ಯಾಲಸ್ ಅಂಗಡಿಯ ಒಳಗಡೆ ಕರೆದುಕೊಂಡು ಹೋದರು. ನಾನು ಒಳಗಡೆ ಹೋಗಿ ನೋಡಿದಾಗ, ಬಲಭಾಗದಲ್ಲಿ ಸದರಿ ಅಂಗಡಿಯ ಮಾಲೀಕರು ಕುಳಿತುಕೊಳ್ಳುವ ಚೇರ್ ಕೆಳಗಡೆ

ಬಿದ್ದಿದ್ದು, ಅಲ್ಲಿ ಯಾವುದೇ ಬಂಗಾರದ ಆಭರಣಗಳು ಇರಲಿಲ್ಲ. ನಾನು ಎಡಭಾಗಕ್ಕೆ ತಿರುಗಿ ನೋಡಿದಾಗ, ಅಲ್ಲಿ ಕೆಲವೊಂದು ಬೆಳ್ಳಿಯ ಆಭರಣಗಳು ಇದ್ದವು.

**5.** ಅಂಗಡಿಯ ಒಳಗಡೆ ತೆಂಗಿನ ನಾರಿನಿಂದ ಮಾಡಿದ 2 ಹಗ್ಗಗಳು ಬಿದ್ದಿದ್ದವು. ಅಲ್ಲಿ ಒಂದು ಕರ್ಚೀಫ್ ಕೂಡ ಬಿದ್ದಿದ್ದು ಅದಕ್ಕೆ ರಕ್ತದ ಕಲೆ ಆಗಿತ್ತು. ಅಲ್ಲಿ ಇನ್ನೊಂದು ಬಟ್ಟೆಯ ತುಂಡು ಬಿದ್ದಿದ್ದು ಅದಕ್ಕೂ ಕೂಡ ರಕ್ತದ ಕಲೆ ಆಗಿತ್ತು. ಪಕ್ಕದಲ್ಲಿಯೇ ನೀಲಿ ಬಣ್ಣದ ಗೆರೆಗಳಿರುವ ಷರಟ್ ಅಲ್ಲಿಯೇ ಬಿದ್ದಿದ್ದು, ಷರಟಿನ 4 ಗುಂಡಿಗಳು ಸಹ ಬಿದ್ದಿದ್ದವು. ಸದರಿ ಷರಟನ್ನು ಪೊಲೀಸರ ಜೊತೆ ಬಂದ ವೈಜ್ಞಾನಿಕ ತನಿಖಾಧಿಕಾರಿಯವರು ಪಡೆದುಕೊಂಡರು. ಅಂಗಡಿಯ ಒಳಗಡೆ ಪಾನ್ ಬೀಡ ತಿಂದು ಉಗುಳಿದಂತೆ ಇರುವ ಕಲೆಗಳನ್ನು ಸಹ ಪೊಲೀಸರು ಪಡೆದುಕೊಂಡರು.

**6.** ಅಂಗಡಿಯಲ್ಲಿ 4 ಸಿಸಿ ಟಿವಿ ಕ್ಯಾಮೆರಾಗಳಿದ್ದು, ಸದರಿ ಕ್ಯಾಮೆರಾದಲ್ಲಿ ಸೆರೆ ಆದ ದೃಶ್ಯಾವಳಿಗಳನ್ನು ಪೊಲೀಸರು ಪಡೆದುಕೊಂಡರು. ಸದರಿ ದೃಶ್ಯಾವಳಿಗಳನ್ನು ನನಗೆ ಪೊಲೀಸರು ಪಡೆದುಕೊಂಡರು. ಪೊಲೀಸರು ಸ್ಥಳದಲ್ಲಿ ಡಿವಿಆರ್ ಅನ್ನು ಸಹ ಪಡೆದುಕೊಂಡಿರುತ್ತಾರೆ. ಸದರಿ ದೃಶ್ಯಾವಳಿಗಳನ್ನು ಒಂದು ಪೆನ್ ಡ್ರೈನಲ್ಲಿ ಹಾಕಿ ಅಮಾನತ್ತುಪಡಿಸಿಕೊಂಡರು. ಸದರಿ ಸ್ಥಳದಲ್ಲಿ 2 ಮಾಸ್ಕ ಗಳನ್ನು ಸಹ ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ.

**7.** ನಂತರ ಅಂಗಡಿಯ ಹೊರಗಡೆ ಬಂದಿರುತ್ತೇವೆ. ಅಂಗಡಿಯ ಹೊರಗಡೆ ಪಕ್ಕದಲ್ಲಿ ಶೂಟ್ ಮಾಡುವ ಕಾಲದಲ್ಲಿ ಬಿದ್ದಿರುತ್ತದೆ ಎಂದು ಹೇಳುವ ಒಂದು ಬುಲೆಟ್ ಕೆಳಗಡೆ ಬಿದ್ದಿದ್ದು, ಅದನ್ನು ಸಹ ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅಲ್ಲಿ

ಪೊಲೀಸರು ನನ್ನ ಸಮಕ್ಷಮ ಅಂದಾಜು 6 ರಿಂದ 7 ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ಪೊಲೀಸರು ಪರಿಶೀಲನೆ ಮಾಡಿ ಮಹಜರ್ ಜರುಗಿಸಿರುತ್ತಾರೆ. ಸದರಿ ಮಹಜರಿಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ವಸ್ತುಗಳನ್ನು ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಮಹಜರ್ ಕಾಲದಲ್ಲಿ ಪೋಟೋಗಳನ್ನು ಸಹ ತೆಗೆದಿರುತ್ತಾರೆ. ಸದರಿ ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಸೀಲ್ ಮಾಡಿ ವಶಕ್ಕೆ ಪಡೆದುಕೊಂಡಿರುತ್ತಾರೆ. ಮಹಜರ್ ಕಾಲದಲ್ಲಿ ತೆಗೆದ ಪೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು 9 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಶಾನೆ ಪಿ–37 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಶಾನೆ ಪಿ–26 ರಲ್ಲಿರುವ ಪೋಟೋಗಳನ್ನು ಸಹ ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ಕಾಲದಲ್ಲಿ ಚಾಸಾಃ4 ರವರು ಸಹ ಹಾಜರಿದ್ದರು. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದಲ್ಲಿ ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲಾದ ಸುಸ್ಥಿತಿಯಲ್ಲಿದ್ದ ವಸ್ತುವನ್ನು ನ್ಯಾಯಾಲಯದ ಅನುಮತಿ ಮೇರೆಗೆ ತೆಗೆದು ನೋಡಲಾಯಿತು. ಸಾಕ್ಷಿಯು ರಕ್ತದ ಕಲೆ ಇರುವ ಮಣ್ಣನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾಃ–24 ಎಂದು ಗುರುತಿಸಲಾಯಿತು. ಸಾಕ್ಷಿಯು ರಕ್ತ ರಹಿತ ಇರುವ ಮಣ್ಣನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾಃ–25 ಎಂದು ಗುರುತಿಸಲಾಯಿತು. ಸಾಕ್ಷಿಯು 2 ಹಗ್ಗವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾಃ–19 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ರಕ್ತದ ಕಲೆ ಇರುವ ಕರವಸ್ತ್ರವನ್ನು ಮತ್ತು ಬಟ್ಟೆಯ ತುಂಡನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾಃ–20

ಎಂದು ಗುರುತಿಸಲಾಗಿರುತ್ತದೆ. ಸ್ಥಳದಲ್ಲಿ ಕೂದಲನ್ನು ಪಡೆದುಕೊಂಡಿದ್ದು, ಅವುಗಳನ್ನು ಮು.ಮಾಃ–26 ಎಂದು ಗುರುತಿಸಲಾಯಿತು. ಸಾಕ್ಷಿಯು ನೀಲಿ ಬಣ್ಣದ ಗೆರೆ ಇರುವ ಷರಟನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾಃ–21 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು 2 ಮಾಸ್ಕಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾಃ–22 ಮತ್ತು 23 ಎಂದು ಗುರುತಿಸಲಾಗಿರುತ್ತದೆ. ಷರಟಿನ ಗುಂಡಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾಃ–27 ಎಂದು ಗುರುತಿಸಲಾಯಿತು.

**8.** ಸ್ಥಳದಲ್ಲಿ ಉಗುಳಿನ ಕಲೆಗಳನ್ನು ಅಮಾನತ್ತುಪಡಿಸಿಕೊಂಡ ಡಬ್ಬವನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಡಬ್ಬ ಬಿಳಿ ಬಟ್ಟೆಯಲ್ಲಿ ಸೀಲ್ ಆಗಿದ್ದು, ಅದನ್ನು ನ್ಯಾಯಾಲಯದ ಅನುಮತಿ ಮೇರೆಗೆ ತೆರೆಯಲಾಯಿತು.

**9.** ಸಿಸಿ ಟಿವಿ ದೃಶ್ಯವಳಿಗಳನ್ನು ಅಮಾನತ್ತುಪಡಿಸಿಕೊಂಡ ಪೆನ್ ಡ್ರೈವ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಶಾನೆ ಪಿ–33 ಮತ್ತು 34 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಡಿ.ವಿ.ಆರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾಃ–17 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಖಾಲಿ ಕಾಟ್ರೇಜ್ ನೋಡಿ ಗುರುತಿಸಿದ್ದು ಅದನ್ನು ಮು.ಮಾಃ–28 ಎಂದು ಗುರುತಿಸಲಾಯಿತು. ಸದರಿ ಸಿಸಿ ಟಿವಿ ದೃಶ್ಯಾವಳಿಗಳನ್ನು ನನಗೆ ತೋರಿಸಿದ್ದು ಸದರಿ ದೃಶ್ಯಾವಳಿಗಳ ಪೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಶಾನೆ ಪಿ–27 ರಲ್ಲಿರುವ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**10.** ದೃಶ್ಯಾವಳಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಶಾನೆ ಪಿ–33 ಮತ್ತು 34 ರಲ್ಲಿರುವ ದೃಶ್ಯಾವಳಿಗಳನ್ನು ನ್ಯಾಯಾಲಯದಲ್ಲಿರುವ ಕಂಪ್ಯೂಟರಿಗೆ ಅಳವಡಿಸಿ ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

**11.** ಸದರಿ ಸ್ಥಳದಲ್ಲಿ ಶ್ವಾನದಳ ಕೂಡ ಬಂದಿದ್ದು, ಸದರಿ ಶ್ವಾನಗಳಿಗೆ ಅಂಗಡಿಯಲ್ಲಿ ವಾಸನೆ ಪಡೆದುಕೊಂಡು ನಂತರ ಶ್ವಾನಗಳು ಅಂಗಡಿಯ ಹಿಂದುಗಡೆ ಇರುವ ಒಂದು ಮೋರಿಯ ಬಳಿ ಹೋಗಿರುತ್ತವೆ. ಸದರಿ ಮೋರಿಯಲ್ಲಿ ಒಂದು ಷರಟ್ ಬಿದಿದ್ದು ಅದನ್ನು ಸಹ ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ಕೂಡ ಪೊಲೀಸರು ಮಹಜರ್ ಜರುಗಿಸಿರುತ್ತಾರೆ ಮತ್ತು ನನ್ನ ಸಹಿಯನ್ನು ಪಡೆದಿರುತ್ತಾರೆ. ಸ್ಥಳದಲ್ಲಿ ಪೋಟೋವನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–38 ಎಂದು, ಸಾಕ್ಷಿಯ ಸಹಿಗಳನ್ನು ನಿಶಾನೆ ಪಿ–38 (ಎ) ಮತ್ತು 38(ಬಿ)ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡ ಷರಟನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದಲ್ಲಿ ಸುಸ್ಥಿತಿಯಲ್ಲಿದ್ದ ವಸ್ತುವನ್ನು ತೆಗೆದು ನೋಡಲಾಗಿ ಅದರಲ್ಲಿ ತಿಳಿನೀಲಿ ಬಣ್ಣದ ಚುಕ್ಕಿಗಳಿರುವ ಷರಟು ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಃ–29 ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ತೆಗೆದ ಪೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು 2 ಪೋಟೋಗಳನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಶಾನೆ ಪಿ–39 ಎಂದು ಗುರುತಿಸಲಾಯಿತು. ಮಹಜರನ್ನು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಜರುಗಿಸಲಾಗಿತ್ತು.

**<u>ಪಾಟೀ ಸವಾಲುಃ ಆರೋಪಿ 1, 3 ಮತ್ತು 8 ರ ಪರ ವಕೀಲರಿಂದಃ–</u>**

1, 3 ಮತ್ತು 8 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರುವಿಚಾರಣೆಃ– ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**